# <u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :673
ಸದಸ್ಯರ ಹೆಸರು : ಶ್ರೀ ಕೆ. ಅಬ್ದುಲ್ ಜಬ್ಬರ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮಜರಾಯಿ ಸಚಿವರು
ಉತ್ತರಿಸುವ ದಿನಾಂಕ : 19.03.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ಹಲವು ವಸತಿ ಶಾಲೆಗಳಿಗೆ ವಿದ್ಯಾಭ್ಯಾಸಕ್ಕಾಗಿ ತೆರಳುವ ಹೆಣ್ಣು ಮಕ್ಕಳಿಗೆ ಬಸ್ ಸೌಕರ್ಯ ವ್ಯವಸ್ಥೆ ಇಲ್ಲದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ:-**<br><br>ವಸತಿ ಶಾಲೆಗಳಿಗೆ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಶಾಲೆಗೆ ದಾಖಲಾದ ನಂತರ ವಿದ್ಯಾರ್ಥಿಗಳಿಗೆ ಉಚಿತ ವಸತಿಯುತ ಶಿಕ್ಷಣದೊಂದಿಗೆ ಅವರಿಗೆ ಅಗತ್ಯರುವ ಎಲ್ಲಾ ಸೌಲಭ್ಯಗಳನ್ನು ಸರ್ಕಾರದಿಂದಲೇ ಒದಗಿಸಲಾಗುತ್ತಿದ್ದು, ವಿದ್ಯಾರ್ಥಿಗಳು ವಸತಿ ಶಾಲೆಗಳಲ್ಲಿಯೇ ವಾಸ್ತವ್ಯವಿರುವುದರಿಂದ ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಸಾರಿಗೆ ಅವಶ್ಯಕತೆ ಇರುವುದಿಲ್ಲ.<br><br>ಕರ್ನಾಟಕ ಸರ್ಕಾರವು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೂಲಕ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಸತಿ ಸಹಿತ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚನ್ನಮ್ಮ/ ಏಕಲವ್ಯ ಮಾದರಿ/ ಅಟಲ್ ಬಿಹಾರಿ ವಾಜಪೇಜಿ/ ಶ್ರೀ ನಾರಾಯಣ ಗುರು ಇತ್ಯಾದಿ ಹೆಸರಿನಿಂದ ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ 821 (503 -ಪ.ಜಾತಿ, 144-ಪ.ವರ್ಗ ಮತ್ತು ಹಿಂ.ವರ್ಗ-174) ವಸತಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ.<br><br>ಈ ವಸತಿ ಶಾಲೆಗಳಲ್ಲಿ ಪ್ರಾರಂಭಿಕ ತರಗತಿಯಾದ 6ನೇ ತರಗತಿಗೆ 2025-26ನೇ ಸಾಲಿಗೆ ಲಭ್ಯವಿರುವ 41,500 ಒಟ್ಟು ಸ್ಥಾನಗಳಿಗೆ ಎರಡು ವಿಧಾನಗಳ ಮೂಲಕ ದಾಖಲಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು, ಇದರಲ್ಲಿ, ಶೇ.50 ರಷ್ಟು ಸ್ಥಾನಗಳನ್ನು ಪ್ರವೇಶ ಪರೀಕ್ಷೆ ಮೂಲಕ ದಾಖಲಾತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕ್ರಮವಹಿಸಲಾಗುತ್ತಿದೆ ಮತ್ತು ಉಳಿದ ಶೇ.50 ರಷ್ಟು ಸ್ಥಾನಗಳನ್ನು ವಿಶೇಷ ವರ್ಗಗಳ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆ ಇಲ್ಲದೇ ನೇರ ದಾಖಲಾತಿ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ. |
| ಆ. | ಬಂದಿದ್ದಲ್ಲಿ, ಯಾವ-ಯಾವ ಭಾಗದ ವಸತಿ ಶಾಲೆ ಮಕ್ಕಳಿಗೆ ಈ ರೀತಿಯ ಬಸ್ ಪ್ರಯಾಣವು ಕಷ್ಟಕರವಾಗಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ : ಸಕಇ 399 ಎಂಡಿಎಸ್ 2022, ಬೆಂಗಳೂರು, ದಿನಾಂಕ:15.03.2024ರಂತೆ ಈ ಕೆಳಕಂಡ ವಿಶೇಷ ವರ್ಗಗಳ ಅಭ್ಯರ್ಥಿಗಳಿಗೆ ಶೇ.50 ಅಂದರೆ 20,750 ಸ್ಥಾನಗಳನ್ನು ಮೀಸಲಿಟ್ಟು ಪ್ರವೇಶ ಪರೀಕ್ಷೆ ಇಲ್ಲದೇ ನೇರ ದಾಖಲಾತಿಗಾಗಿ ಅವಕಾಶವನ್ನು ಕಲ್ಪಿಸಲಾಗಿದ್ದು, ವಿವರ ಕೆಳಕಂಡಂತಿವೆ. |

| ಕ್ರ.ಸಂ. | ವಿಶೇಷ ಮಾರ್ಗ | ಶೇಕಡ ವಾರು |
|---|---|---|

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ.</td><td>ಸದರಿ ಮಕ್ಕಳ ಬಸ್ ಪ್ರಯಾಣ ಸೌಕರ್ಯ ಒದಗಿಸಲು ಸರ್ಕಾರ ತೆಗೆದು ಕೊಂಡ ಕ್ರಮಗಳಾವುವು; (ಸಂಪೂರ್ಣ ಮಾಹಿತಿ ಒದಗಿಸುವುದು)</td><td rowspan="2">
<table>
<tr><td>1</td><td>ಸಫಾಯಿ ಕರ್ಮಚಾರಿ/ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್/ ಚಿಂದಿ ಆಯುವವರು/ಸ್ಮಶಾನ ಕಾರ್ಮಿಕರ ಮಕ್ಕಳು</td><td>ಶೇ.10</td></tr>
<tr><td>2</td><td>ಬಾಲ ಕಾರ್ಮಿಕರು/ಜೀತ ವಿಮುಕ್ತ ಕಾರ್ಮಿಕರ ಮಕ್ಕಳು/ಗುರುತಿರುವ ಮಾಜಿ ದೇವದಾಸಿಯರ ಮಕ್ಕಳು</td><td>ಶೇ.10</td></tr>
<tr><td>3</td><td>25% ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು/ ಹೆಚ್.ಐ.ವಿ.ಗೆ ತುತ್ತಾದ ಪೋಷಕರ ಮಕ್ಕಳು, ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳು</td><td>ಶೇ.10</td></tr>
<tr><td>4</td><td>ಗುರುತಿಸಿರುವ ಅಲೆಮಾರಿ/ ಅರೆ ಅಲೆಮಾರಿ/ ಸೂಕ್ಷ್ಮ-ಅತೀ ಸೂಕ್ಷ್ಮ ಸಮುದಾಯದ/ ಸೈನಿಕರು ಮತ್ತು ಮಾಜಿ ಸೈನಿಕರು/ಸರ್ಕಾರದ ಯೋಜನೆಗಳಿಂದ ಸ್ಥಳಾಂತರಗೊಂಡ ಪೋಷಕರ ಮಕ್ಕಳು</td><td>ಶೇ.10</td></tr>
<tr><td>5</td><td>ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಆಶ್ರಮ ವಸತಿ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾದ ಮಕ್ಕಳು.</td><td>ಶೇ.10</td></tr>
<tr><td></td><td>ಒಟ್ಟು</td><td>ಶೇ.50</td></tr>
</table>
<br>ಸರ್ಕಾರದ ಆದೇಶ ಸಂಖ್ಯೆ :ಸಕಇ.ಎಂ.ಡಿ.ಎಸ್/78/2023 (P-1), ಬೆಂಗಳೂರು ದಿನಾಂಕ 12.02.2024 ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಾತಿಯಲ್ಲಿ ಜಿಲ್ಲೆಯನ್ನು ಒಂದು ಘಟಕವನ್ನಾಗಿ ಪರಿಗಣಿಸಿ ಎಲ್ಲಾ ತಾಲ್ಲೂಕಿನ ಸ್ಥಳೀಯ ಅಭ್ಯರ್ಥಿಗಳಿಗೆ ಶೇ.75 ರಷ್ಟು ಹಾಗೂ ಅದೇ ಜಿಲ್ಲೆಯ ಇತರೆ ತಾಲ್ಲೂಕಿನ ಅಭ್ಯರ್ಥಿಗಳಿಗೆ ಶೇ.25 ರಷ್ಟು ಸೀಟುಗಳ ದಾಖಲಾತಿಗೆ ಅವಕಾಶ ಕಲ್ಪಿಸಿದೆ.
<br><br>2024-25 ನೇ ಸಾಲಿನಲ್ಲಿ 22 ಶಾಲೆಗಳು ಹೊಸದಾಗಿ ಮಂಜೂರಾಗಿದ್ದು, 2025-26ನೇ ಶೈಕ್ಷಣಿಕ ಸಾಲಿಗೆ ಒಟ್ಟು 817 ವಸತಿ ಶಾಲೆಗಳಲ್ಲಿ 6ನೇ ತರಗತಿಗೆ 41500 ಸೀಟುಗಳು ಲಭ್ಯವಿರುತ್ತವೆ.
<br><br>2025-26ನೇ ಸಾಲಿನ ಆಯ-ವ್ಯಯದ ಕಂಡಿಕೆ 176 ರಲ್ಲಿ "ವಸತಿ ಶಾಲೆಗಳಿಲ್ಲದ ಹೋಬಳಿಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ 26 ಹೊಸ ವಸತಿ ಶಾಲೆಗಳನ್ನು ಮಂಜೂರು ಮಾಡಿ ಘೋಷಿಸಲಾಗಿರುತ್ತದೆ ಹಾಗೂ ಕಂಡಿಕೆ 202ರಲ್ಲಿ
</td></tr>
<tr><td>ಈ.</td><td>ಗ್ರಾಮೀಣ ಭಾಗಗಳಲ್ಲಿ ಬಡವರು ಹೆಚ್ಚಾಗಿರುವುದರಿಂದ ಅಲ್ಲಿನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಸತಿ ಶಾಲೆಗಳನ್ನು ಅಲ್ಲಿಯೇ ತೆರೆಯಲು ಸರ್ಕಾರ ಚಿಂತಿಸಿದೆಯೇ; ಇದ್ದಲ್ಲಿ, ತೆಗೆದುಕೊಂಡ ಕ್ರಮಗಳಾವುವು?</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತರಾಗಿರುವ, ಹಿಂದುಳಿದ ವರ್ಗಗಳಲ್ಲಿಯೇ ಅತ್ಯಂತ ಹಿಂದುಳಿದ 46 ಅಲೆಮಾರಿ ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ತಲಾ ಒಂದರಂತೆ ಡಿ.ದೇವರಾಜ್ ಅರಸು ವಸತಿ ಶಾಲೆಗಳನ್ನು ಕ್ರೈಸ್ ವತಿಯಿಂದ ಪ್ರಾರಂಭಿಸಲಾಗುವುದೆಂದು ಘೋಷಿಸಲಾಗಿರುತ್ತದೆ.<br><br>2025-26 ನೇ ಸಾಲಿನ ಆಯವ್ಯಯ ಕಂಡಿಕೆ 175ರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಒಟ್ಟು 31 ವಸತಿ ಶಾಲೆಗಳನ್ನು ಪಿ.ಯು.ಕಾಲೇಜಗಳನ್ನಾಗಿ ಉನ್ನತೀಕರಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ.<br><br>ಸರ್ಕಾರದ ಆದೇಶಗಳನ್ನು "**ಅನುಬಂಧ-ಅ**"ರಲ್ಲಿ ನೀಡಿದೆ.<br><br>**ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ:-**<br>ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಪ್ರದೇಶಗಳಲ್ಲಿ ಪ್ರಸ್ತುತ 161 ವಿವಿಧ ವಸತಿ ಶಾಲೆ/ಕಾಲೇಜುಗಳು ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ವಿವರವನ್ನು "**ಅನುಬಂಧ-ಆ**"**ರಲ್ಲಿ** ನೀಡಿದೆ.<br><br>2025-26ನೇ ಸಾಲಿನಲ್ಲಿ 25 ಹೊಸ ಮೊರಾರ್ಜಿ ದೇಸಾಯಿ ವಸತಿ ಜನಸಂಖ್ಯೆ, ಜನಪ್ರತಿನಿಧಿಗಳ ಬೇಡಿಕೆ ಹಾಗೂ ಜಿಲ್ಲಾ ಅಧಿಕಾರಿಗಳ ಸ್ಥಳ ಪರಿಶೀಲನಾ ವರಿದಿಯನ್ವಯ ಗ್ರಾಮೀಣ ಭಾಗಗಳಲ್ಲಿ ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ.<br><br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:-**<br>ನಿಗಮದ ವ್ಯಾಪ್ತಿಯಲ್ಲಿರುವ ವಿಭಾಗಗಳಿಗೆ ವಸತಿ ಶಾಲೆಗಳಿಗೆ ವಿದ್ಯಾಭ್ಯಾಸಕ್ಕಾಗಿ ತೆರಳುವ ಹೆಣ್ಣು ಮಕ್ಕಳಿಗೆ ಬಸ್ ಸೌಕರ್ಯ ವ್ಯವಸ್ಥೆ ಕಲ್ಪಿಸುವ ಕುರಿತು ಒಟ್ಟು 2 ಮನವಿಗಳು ಸ್ವೀಕೃತವಾಗಿದ್ದು, ಅದರಂತೆ ಸಾರಿಗೆ ಸೌಲಭ್ಯ ಒದಗಿಸಲಾಗಿದೆ. |

| ವಿವರ | ಷರಾ |
|---|---|
| ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ತುಮಕೂರು ಇವರು ತುಮಕೂರು ನಗರದ ಗೆದ್ದಲಹಳ್ಳಿಯಲ್ಲಿರುವ ಹಿಂದೂಳಿದ ವರ್ಗ ಮತ್ತು ಅಲ್ಪಸಂಖ್ಯಾತ ಮಹಿಳಾ ವಸತಿ ಶಾಲೆಯಿಂದ ತುಮಕೂರುಗೆ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ದಿನಾಂಕ.17.01.2025ರಂದು ಕೋರಿರುವ ಬಗ್ಗೆ | ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | <table><tr><td>ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ತುಮಕೂರು ರವರು ತುಮಕೂರು ನಗರದ ಮೈದಾಳ ರಸ್ತೆಯಲ್ಲಿರುವ ಹಿಂದೂಳಿದ ವರ್ಗ ಮತ್ತು ಅಲ್ಪಸಂಖ್ಯಾತ ಮಹಿಳಾ ವಸತಿ ಶಾಲೆಯಿಂದ ತುಮಕೂರುಗೆ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ದಿನಾಂಕ.23.07.2024ರಂದು ಕೋರಿರುವ ಬಗ್ಗೆ</td><td>ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.</td></tr></table><br>ಶಕ್ತಿ ಯೋಜನೆ ಜಾರಿಗೂ ಮೊದಲು ನಿಗಮದ ವತಿಯಿಂದ 7482 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು, ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ ಪ್ರಸ್ತುತ 8069 ಅನುಸೂಚಿಗಳನ್ನು ಮಾಡಲಾಗುತ್ತಿದೆ. ಅಂದರೆ, ಪ್ರತಿದಿನ 587 ಹೆಚ್ಚುವರಿ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಶಕ್ತಿ ಯೋಜನೆ ಜಾರಿಗೂ ಮೊದಲು ಕರಾರಸಾ ನಿಗಮದ ವತಿಯಿಂದ 45255 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು, ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ 50598 ಸರತಿಗಳನ್ನು ಮಾಡಲಾಗುತ್ತಿದೆ. ಪ್ರತಿದಿನ 5343 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಪ್ರಸ್ತುತ, ಕಲ್ಪಿಸುತ್ತಿರುವ ಸಾರಿಗೆಗಳು ಶಾಲಾ/ಕಾಲೇಜು ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಇರುತ್ತದೆ. ಅದಾಗ್ಯೂ, ಹೆಚ್ಚುವರಿ ಬೇಡಿಕೆ ಬಂದಲ್ಲಿ, ಬೇಡಿಕೆಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಕ್ರೂಢೀಕರಿಸಿಕೊಂಡು ಮಾರ್ಗ ಸಮೀಕ್ಷೆ ಕೈಗೊಂಡು ಪರಿಶೀಲಿಸಿ ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:-**<br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು, ಸಾರ್ವಜನಿಕ ಸೇವಾ ಸಂಸ್ಥೆಯಾಗಿದ್ದು, ಬೆಂಗಳೂರು ನಗರ ಹಾಗೂ ಹೊರ ವಲಯದ ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ, ಸುಲಭ, ಸುರಕ್ಷಿತ ಸಾರಿಗೆ ಸೇವೆಯನ್ನು ಒದಗಿಸಲು ನಿರಂತರವಾಗಿ ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ಪ್ರತಿದಿನ ಹವಾನಿಯಂತ್ರಿತ ಸಾರಿಗೆಗಳನ್ನು ಒಳಗೊಂಡಂತೆ 5867 ಅನುಸೂಚಿಗಳನ್ನು 61,631 ಸುತ್ತುವಳಿಗಳೊಂದಿಗೆ 12.06 ಲಕ್ಷ ಕಿ.ಮೀ.ಗಳಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗನುಗುಣವಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಸರಾಸರಿ 40 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 25.00 ಕಿ.ಮೀ.ವರೆಗೆ ಕಾರ್ಯಾಚರಣೆ ವ್ಯಾಪ್ತಿಯನ್ನು ಹೊಂದಿದ್ದು, ಸಂಸ್ಥೆಯ ಕಾರ್ಯಾಚರಣೆ ವ್ಯಾಪ್ತಿಗೆ ಒಳಪಡುವ ಹಾಗೂ ಬಸ್ಸುಗಳ ಕಾರ್ಯಾಚರಣೆಗೆ ಯೋಗ್ಯ ರಸ್ತೆಗಳಿರುವ ಎಲ್ಲಾ ಪ್ರದೇಶಗಳಿಗೂ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿದೆ.<br><br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ವಸತಿ ಶಾಲೆಗಳಿಗೆ ವಿದ್ಯಾಭ್ಯಾಸಕ್ಕಾಗಿ ತೆರಳುವ ಹೆಣ್ಣು ಮಕ್ಕಳಿಗಾಗಿ ಬಸ್ ಸೌಕರ್ಯ ವ್ಯವಸ್ಥೆಗೆ ಸಂಬಂಧಿಸಿದಂತೆ ಯಾವುದೇ ಮನವಿಗಳನ್ನು ಸ್ವೀಕರಿಸಿರುವುದಿಲ್ಲ.<br><br>ಮುಂದುವರೆದು, ಸಾರ್ವಜನಿಕ ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ, ಮೂಲಭೂತ ಸೌಕರ್ಯಗಳ ಲಭ್ಯತೆಗನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸುವುದು, ಹಾಲಿಯಿರುವ ಮಾರ್ಗಗಳಲ್ಲಿ ಸಾರಿಗೆಗಳನ್ನು ಹೆಚ್ಚಿಸುವುದು ಮತ್ತು ಪ್ರಯಾಣಿಕರ ಸಂಚಾರ ದಟ್ಟಣೆಗನುಗುಣವಾಗಿ ಸಾರಿಗೆಗಳನ್ನು ಪರಿಷ್ಕರಿಸಿ ಕಾರ್ಯಾಚರಣೆಗೊಳಿಸಲಾಗುತ್ತಿದೆ.<br><br>ಅಲ್ಲದೇ, ವಿದ್ಯಾರ್ಥಿ ಸಮುದಾಯ/ ಸಾರ್ವಜನಿಕ ಪ್ರಯಾಣಿಕರು/ ಸಂಘ ಸಂಸ್ಥೆಗಳು/ ಜನಪ್ರತಿನಿಧಿಗಳು ಇತ್ಯಾದಿ ಮೂಲಗಳಿಂದ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯಾಚರಣೆ ವ್ಯಾಪ್ತಿಗೆ ಒಳಪಡುವ ಯಾವುದೇ ಪ್ರದೇಶಕ್ಕೆ ಸಾರಿಗೆ ಸೌಲಭ್ಯವನ್ನು ಒದಗಿಸುವಂತೆ ಅಥವಾ ಹೆಚ್ಚಿಸುವಂತೆ ಮನವಿಗಳು ಬಂದಲ್ಲಿ, ಪರಿಶೀಲಿಸಿ ಕ್ರಮ ಕೈಗೊಳ್ಳುವ ಪ್ರಕ್ರಿಯೆಯು ಸಂಸ್ಥೆಯಲ್ಲಿ ನಿರಂತರವಾಗಿ ಜಾರಿಯಲ್ಲಿರುತ್ತದೆ.<br><br>**ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:-**<br>ವಸತಿ ಶಾಲೆಗಳಿಗೆ ವಿದ್ಯಾಭ್ಯಾಸಕ್ಕಾಗಿ ತೆರಳುವ ಹೆಣ್ಣು ಮಕ್ಕಳ ಬೇಡಿಕೆ/ ಅವಶ್ಯಕತೆಗೆ ಅನುಗುಣವಾಗಿ ಸಂಸ್ಥೆವ್ಯಾಪ್ತಿಯಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸುವ ಕ್ರಮ ನಿರಂತರ ಜಾರಿಯಲ್ಲಿದೆ.<br><br>**ಸಂಸ್ಥೆಯ ವ್ಯಾಪ್ತಿಯ ವಿಭಾಗಗಳಲ್ಲಿ ಸ್ವೀಕೃತಗೊಂಡ ಬೇಡಿಕೆಗಳ ವಿವರ ಕೆಳಗಿನಂತಿದೆ**:<br>• ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆ ವಕ್ಕುಂದ.<br>• ಹಾವೇರಿ ಜಿಲ್ಲೆಯ ಹಾವೇರಿ ತಾಲೂಕಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಸತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಳ್ಳಿಹಾಳ.<br>• ಕಾರವಾರ ಜಿಲ್ಲೆಯ ಕಾರವಾರ ತಾಲೂಕಿನ ಸಿದ್ದರ ಗ್ರಾಮದ ಬಾಲಕಿಯರ ವಸತಿ ಶಾಲೆ.<br><br>ಪ್ರಸ್ತುತ ಸದರಿ ಮಕ್ಕಳಿಗೆ ಬೇಡಿಕೆ/ ಅವಶ್ಯಕತೆಗನುಗುಣವಾಗಿ ಬಸ್ ಪ್ರಯಾಣ ಸೌಕರ್ಯ ಒದಗಿಸಲು ಈ ಕೆಳಗಿನಂತೆ ಕ್ರಮವಹಿಸಲಾಗಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಮೊರಾರ್ಜಿ ದೇಸಾಯಿ ವಸತಿ ಶಾಲೆ ವಕ್ಕುಂದಕ್ಕೆ ಬೈಲಹೊಂಗಲ-ವಕ್ಕುಂದ ಮಾರ್ಗದ ಸಾರಿಗೆಗಳಿಗೆ 6.45, 7.30, 8.15, 9.45, 10.30, 11.00, 11.30, 11.55, 12.15, 12.45, 13.45, 15.00, 15.30, 16.30, 16.45, 17.15, 18.15, 19.45, 21.00 ಗಂಟೆಗಳಿಗೆ ನಿಲುಗಡೆ ಕಲ್ಪಿಸಲಾಗಿದೆ.<br><br>ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಸತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಳ್ಳಿಹಾಳಕ್ಕೆ ಹಾವೇರಿ-ಭೂ.ವೀರಾಪೂರ-ಮಾಳಾಪುರ ಮಾರ್ಗವಾಗಿ ಕಾಲೇಜಿಗೆ 8.00, 9.45, 15.00, 17.00 ಗಂಟೆಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.<br><br>ಕಾರವಾರ ತಾಲೂಕಿನ ಸಿದ್ದರ ಗ್ರಾಮದ ಬಾಲಕಿಯರ ವಸತಿ ಶಾಲೆಗೆ 6.15, 7.15, 8.00, 9.00, 10.00, 12.00, 13.45, 14.30, 16.30, 17.30 ಗಂಟೆಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.<br><br>ಅಲ್ಲದೇ, ಪ್ರಸ್ತುತ ಸಂಸ್ಥೆಯಲ್ಲಿ ಕಾರ್ಯಾಚರಣೆಯಲ್ಲಿರುವ ಸಾರಿಗೆಗಳಿಗೆ ಸಂಸ್ಥೆ ವ್ಯಾಪ್ತಿಯ ಮಾರ್ಗ ಮಧ್ಯದ ವಸತಿ ಶಾಲೆಗಳಿಗೆ ನಿಲುಗಡೆಗಳನ್ನು ಕಲ್ಪಿಸಿ, ಸಾರಿಗೆ ಸೌಲಭ್ಯ ಒದಗಿಸಲಾಗಿದೆ.<br><br>ಸಂಸ್ಥೆಯಲ್ಲಿ 2023-24ನೇ ಸಾಲಿನಲ್ಲಿ ಒಟ್ಟು 296 ಹೊಸ ವಾಹನಗಳನ್ನು ಖರೀದಿಸಲಾಗಿರುತ್ತದೆ ಹಾಗೂ 2024-25ನೇ ಸಾಲಿನಲ್ಲಿ ದಿನಾಂಕ 28-02-2025 ರವರೆಗೆ ಒಟ್ಟು 560 ಹೊಸ ವಾಹನಗಳು ಒಟ್ಟಾರೆಯಾಗಿ 856 ಹೊಸ ವಾಹನಗಳನ್ನು ಖರೀದಿಸಿ ಸಾರ್ವಜನಿಕ ಪ್ರಯಾಣಕ್ಕೆ ಒದಗಿಸಲಾಗಿದೆ.<br><br>ಶಕ್ತಿ ಯೋಜನೆ ಜಾರಿಗೂ ಮೊದಲು 4567 ಅನುಸೂಚಿಗಳಿಂದ 34676 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಶಕ್ತಿ ಯೋಜನೆ ಜಾರಿ ನಂತರದಲ್ಲಿ ಅಂದರೆ ಜನೇವರಿ-2025 ರ ಮಾಹೆಯ ಅಂತ್ಯಕ್ಕೆ 4763 ಅನುಸೂಚಿಗಳಿಂದ 37453 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರತಿ ದಿನ 196 ಅನುಸೂಚಿಗಳನ್ನು ಹಾಗೂ ಒಟ್ಟು 2777 ಸರತಿಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಜೂನ-23ರ ನಂತರದ ಅವಧಿಯಲ್ಲಿ 129 ಅಂತರರಾಜ್ಯ ಸಾರಿಗೆಗಳನ್ನು ಸ್ಥಗಿತಗೊಳಿಸಿ, ಸದರಿ ವಾಹನಗಳನ್ನೂ ಸಹ ರಾಜ್ಯದೊಳಗೆ ಕಾರ್ಯಾಚರಣೆಗೆ ಬಳಸಿಕೊಂಡು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ವಿದ್ಯಾರ್ಥಿ/ಸಾರ್ವಜನಿಕರಿಂದ ಸಾರಿಗೆ ಸೌಲಭ್ಯ ಕೋರಿ ಬಂದ ಬೇಡಿಕೆ/ಅವಶ್ಯಕತೆಗೆ ಅನುಗುಣವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಿಸುವ ಕ್ರಮ ನಿರಂತರ ಜಾರಿಯಲ್ಲಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | **ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**:-<br>ನಿಗಮದ ವ್ಯಾಪ್ತಿಯಲ್ಲಿ ಬರುವ ವಸತಿ ಶಾಲೆಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುವ ವಿವರಗಳನ್ನು "ಅನುಬಂಧ-ಅ" ರಲ್ಲಿ ಲಗತ್ತಿಸಲಾಗಿದೆ.<br><br>ವಸತಿ ಶಾಲೆಗಳಿಗೆ ಸಾರಿಗೆ ಸೌಲಭ್ಯ/ನಿಲುಗಡೆ ಕೋರಿ ಸ್ವೀಕೃತವಾಗುವ ಮನವಿಗಳನ್ನು ಪರಿಶೀಲಿಸಿ, ಕ್ರಮವಹಿಸಲಾಗುತ್ತಿದೆ.<br><br>"ಶಕ್ತಿ ಯೋಜನೆ" ಜಾರಿಯಾದಾಗಿನಿಂದ ಬಸ್‌ಗಳಲ್ಲಿ ಸಂಚರಿಸುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುತ್ತದೆ. ಈ ಸಂಬಂಧ ಕ.ಕ.ರ.ಸಾ.ನಿಗಮದ ವ್ಯಾಪ್ತಿಯ ಎಲ್ಲಾ ತಾಲ್ಲೂಕುಗಳ ಶಾಲಾ-ಕಾಲೇಜು ಮುಖ್ಯೋಪಾಧ್ಯಾಯರು/ ಪ್ರಾಂಶುಪಾಲರು/ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆಯನ್ನು ಏರ್ಪಡಿಸಿ, ಮನವಿಗಳನ್ನು ಪಡೆದುಕೊಂಡು ಬೇಡಿಕೆಗೆ ಅನುಗುಣವಾಗಿ ಹೆಚ್ಚುವರಿ ಸರತಿಗಳನ್ನು ಅಳವಡಿಸಲು ಕ್ರಮವಹಿಸ ಲಾಗುತ್ತಿದೆ.<br><br>ಪ್ರತಿ ತಿಂಗಳು ಮೊದಲನೇಯ ಸೋಮವಾರದಂದು ಎಲ್ಲಾ ವಿಭಾಗಗಳಲ್ಲಿ ಫೋನ್-ಇನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ಕಾರ್ಯ ಕ್ರಮದಲ್ಲಿ ಸ್ವೀಕೃತವಾಗುವ ಮನವಿ/ ಅಹವಾಲುಗಳನ್ನು ಪಡೆದುಕೊಂಡು ಕ್ರಮ ಜರುಗಿಸಲಾಗುತ್ತಿದೆ.<br><br>"ಶಕ್ತಿ ಯೋಜನೆ" ಜಾರಿ ಪೂರ್ವ 4028 ಅನುಸೂಚಿಗಳಿಂದ 22214 ಸರತಿಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ಶಕ್ತಿ ಯೋಜನೆ ಜಾರಿಯಾದ ನಂತರ 4636 ಅನುಸೂಚಿಗಳಿಂದ 27200 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>"ಶಕ್ತಿ ಯೋಜನೆ" ಪೂರ್ವಕ್ಕೆ ಹೋಲಿಸಿದಲ್ಲಿ ಪ್ರತಿ ದಿನ 608 ಹೆಚ್ಚಿನ ಅನುಸೂಚಿಗಳಿಂದ 4986 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳ ಬೇಡಿಕೆ/ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಸಾರ್ವಜನಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸದರಿ ಸಾರಿಗೆಗಳ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಇನ್ನೂ ಹೆಚ್ಚಿನ ಬೇಡಿಕೆಗಳು ಬಂದಲ್ಲಿ ಮೂಲಭೂತ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಪರಿಶೀಲಿಸಿ, ಹಂತ ಹಂತವಾಗಿ ಒದಗಿಸಲಾಗುವುದು. |

ಸಂಖ್ಯೆ: ಟಿಡಿ 40 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ - ಅ



**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: 2024-25 ನೇ ಸಾಲಿನ ಆಯವ್ಯಯ ಕಂಡಿಕೆ-163 ರಲ್ಲಿ ವಸತಿ ಶಾಲೆಗಳು ಇಲ್ಲದಿರುವ ಹೋಬಳಿಗಳ ಪೈಕಿ, 20 ಹೋಬಳಿಗಳಲ್ಲಿ ಹೊಸ ವಸತಿ ಶಾಲೆಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೂಲಕ ಪ್ರಾರಂಭಿಸುವ ಕುರಿತು.

ಓದಲಾಗಿದೆ: ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಏಕ ಕಡತ ಸಂಖ್ಯೆ:1387504 - KREIS/TECH/OTH/145/2024

*****

**ಪ್ರಸ್ತಾವನೆ:-**

2024-25ನೇ ಸಾಲಿನ ಆಯವ್ಯಯದ ಕಂಡಿಕೆ-163 ರಲ್ಲಿ ವಸತಿ ಶಾಲೆಗಳು ಇಲ್ಲದಿರುವ ಹೋಬಳಿಗಳ ಪೈಕಿ 20 ಹೋಬಳಿಗಳಲ್ಲಿ ಹೊಸ ವಸತಿ ಶಾಲೆಗಳನ್ನು ಕ್ರೈಸ್ ಸಂಸ್ಥೆಯ ಮೂಲಕ ಪ್ರಾರಂಭಿಸಲಾಗುವುದೆಂದು ಘೋಷಿಸಲಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ರಾಜ್ಯದ 31 ಜಿಲ್ಲೆಗಳು, 231- ತಾಲ್ಲೂಕುಗಳಲ್ಲಿ 770 -ಹೋಬಳಿಗಳ ಪೈಕಿ, ಪರಿಶಿಷ್ಟ ಜಾತಿ- 503, ಪರಿಶಿಷ್ಟ ವರ್ಗದ -144 ಹಾಗೂ ಹಿಂದುಳಿದ ವರ್ಗದ-174 ವಸತಿ ಶಾಲೆಗಳು ಒಟ್ಟಾರೆ 821 ವಸತಿ ಶಾಲೆ / ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ನಗರ ಮತ್ತು ಕಸಬಾ ಹೋಬಳಿಗಳನ್ನು ಹೊರತುಪಡಿಸಿ, ಒಟ್ಟು 114 ಹೋಬಳಿಗಳಲ್ಲಿ ವಸತಿ ಶಾಲೆಗಳು ಇರುವುದಿಲ್ಲ.

2024-25ನೇ ಸಾಲಿನ ಆಯವ್ಯಯದಲ್ಲಿ 20 ಹೋಬಳಿಗಳಲ್ಲಿ ಹೊಸ ಶಾಲೆಗಳನ್ನು ಮಂಜೂರು ಮಾಡಲು ಹಾಗೂ ಪ್ರತಿ ಶಾಲೆಗೆ 8 ರಿಂದ 10 ಎಕರೆ ಜಮೀನಿನ ಅವಶ್ಯಕತೆ ಇದ್ದು, 31 ಜಿಲ್ಲೆಗಳ ಪೈಕಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಬೆಳಗಾವಿ, ಧಾರವಾಡ, ಹಾಸನ, ಚಿಕ್ಕಮಗಳೂರು, ಮಂಡ್ಯ, ದಾವಣಗೆರೆ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳು ಮತ್ತು ಎಲ್ಲಾ ತಾಲ್ಲೂಕುಗಳಲ್ಲಿ ವಸತಿ ಶಾಲೆಗಳಿಲ್ಲದ ಕಸಬಾ ಹೋಬಳಿಗಳನ್ನು ಹಾಗೂ ಒಂದೇ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಂದೇ ಹೋಬಳಿಯಲ್ಲಿ ಒಂದಕ್ಕಿಂತ ಹೆಚ್ಚು ವಸತಿ ಶಾಲೆಗಳು ಇದ್ದು, ಈ ಪೈಕಿ ಹಾಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ 09 ಶಾಲೆಗಳನ್ನು ಸ್ಥಳಾಂತರಿಸಬಹುದಾಗಿರುತ್ತದೆ. ಈ ಶಾಲೆಗಳನ್ನು ಹೊರತುಪಡಿಸಿ, 2024-25ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ 20 ಹೋಬಳಿಗಳಲ್ಲಿ ಹೊಸ ವಸತಿ ಶಾಲೆಗಳನ್ನು ಮಂಜೂರು ಮಾಡುವಂತೆ ಕೋರಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು ಏಕ ಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

2024-25ನೇ ಸಾಲಿನ ಆಯವ್ಯಯದ ಕಂಡಿಕೆ-163 ರಲ್ಲಿ ವಸತಿ ಶಾಲೆಗಳು ಇಲ್ಲದಿರುವ ಹೋಬಳಿಗಳ ಪೈಕಿ 20 ಹೋಬಳಿಗಳಲ್ಲಿ 20 ವಸತಿ ಶಾಲೆಗಳನ್ನು ಪ್ರಾರಂಭಿಸಲು ಘೋಷಿಸಿರುವ ಪ್ರಸ್ತಾವನೆಗೆ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಆರ್ಥಿಕ ಇಲಾಖೆಗಳು ಸಹಮತಿ ನೀಡಿರುವಂತೆ ಈ ಕೆಳಕಂಡಂತೆ ಆದೇಶಿಸಿದೆ.

2--



Generated from eOffice by MUNISWAMY JAYCHANDRARAJU, KREIS-ENG- EE(MJR), EXECUTIVE ENGINEER, KARNATAKA RESIDENTAL EDUCATIONAL INSTITUTIONS SOCI

### ಸರ್ಕಾರದ ಆದೇಶ ಸಂಖ್ಯೆ:ಸಕಇ 108 ಎಂಡಿಎಸ್ 2024, ದಿನಾಂಕ:24.06.2024 ರ ಅನುಬಂಧ

| ಕ್ರ. ಸಂ | ಜಿಲ್ಲೆ | ವಿಧಾನಸಭಾ ಕ್ಷೇತ್ರ | ತಾಲ್ಲೂಕು | ಹೋಬಳಿ |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಹೊಸಕೋಟೆ | ಹೊಸಕೋಟೆ | ಅನುಗೊಂಡನಹಳ್ಳಿ |
| 2 | ಚಿಕ್ಕಬಳ್ಳಾಪುರ | ಚಿಂತಾಮಣಿ | ಚಿಂತಾಮಣಿ | ಕೈವಾರ |
| 3 | ದಾವಣಗೆರೆ | ಚನ್ನಗಿರಿ | ಚನ್ನಗಿರಿ | ಸಂತೇಬೆನ್ನೂರು-2 |
| 4 | ದಾವಣಗೆರೆ | ಹೊನ್ನಾಳಿ | ಹೊನ್ನಾಳಿ | ಸಾಸ್ವೆಹಳ್ಳಿ 1 |
| 5 | ಕೋಲಾರ | ಬಂಗಾರಪೇಟೆ | ಬಂಗಾರಪೇಟೆ | ಕಾಮಸಮುದ್ರ |
| 6 | ತುಮಕೂರು | ಕುಣಿಗಲ್ | ಕುಣಿಗಲ್ | ಅಮೃತೂರು |
| 7 | ಮೈಸೂರು | ಪಿರಿಯಾಪಟ್ಟಣ | ಪಿರಿಯಾಪಟ್ಟಣ | ಬೆಟ್ಟದಪುರ |
| 8 | ಮಂಡ್ಯ | ಮಳವಳ್ಳಿ | ಮಳವಳ್ಳಿ | ಕಿರುಗಾವಲು-2 |
| 9 | ಮಂಡ್ಯ | ಶ್ರೀರಂಗಪಟ್ಟಣ | ಮಂಡ್ಯ | ಕೊತ್ತತ್ತಿ-2 |
| 10 | ಚಿಕ್ಕಮಗಳೂರು | ಕಡೂರು | ಕಡೂರು | ಬೀರೂರು |
| 11 | ಹಾಸನ | ಬೇಲೂರು | ಅರಸೀಕೆರೆ | ಜಾವಗಲ್ |
| 12 | ದಕ್ಷಿಣ ಕನ್ನಡ | ಮಂಗಳೂರು | ಮಂಗಳೂರು | ಉಳ್ಳಾಳ |
| 13 | ಕೊಡಗು | ವಿರಾಜಪೇಟೆ | ಪೊನ್ನಂಪೇಟೆ | ಹುದಿಕೇರಿ |
| 14 | ಬೆಳಗಾವಿ | ಯಮಕನಮರಡಿ | ಹುಕ್ಕೇರಿ | ಯಮಕನಮರಡಿ |
| 15 | ಉತ್ತರಕನ್ನಡ | ಹಳಿಯಾಳ | ಸೂಪ | ಕುಂಬಾರವಾಡ |
| 16 | ಉತ್ತರಕನ್ನಡ | ಕಾರವಾರ | ಕಾರವಾರ | ಕಿನ್ನರ |
| 17 | ವಿಜಯಪುರ | ಬಸವನ ಬಾಗೇವಾಡಿ | ಬಸವನ ಬಾಗೇವಾಡಿ | ಮನಗೂಳಿ |
| 18 | ಬೀದರ | ಭಾಲ್ಕಿ | ಭಾಲ್ಕಿ | ಖಟಕಚಿಂಚೋಳಿ |
| 19 | ರಾಯಚೂರು | ಸಿಂಧನೂರು | ಸಿಂಧನೂರು | ಜವಳಗೆರೆ |
| 20 | ರಾಯಚೂರು | ಮಸ್ಕಿ | ಮಸ್ಕಿ | ಪಾಮನಕಲ್ಲೂರು |

(ಎಂ. ಸುಮಿತ್ರ)
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ


Generated from eOffice by MUNISWAMY JAYCHANDRARAJU, KREIS ENG, EE(MJR), EXECUTIVE ENGINEER, KARNATAKA RESIDENTIAL EDUCATIONAL INSTITUTIONS SOCI

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2024-25ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಬಳಗೇರಾ ಗ್ರಾಮದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ನೂತನವಾಗಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೂಲಕ ಪ್ರಾರಂಭಿಸಲು ಮಂಜೂರು ಮಾಡುವ ಕುರಿತು

ಓದಲಾಗಿದೆ: ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಏಕ ಕಡತ ಸಂಖ್ಯೆ: 1517702 -KREIS/TECH/OTH/311/2024.

*****

**ಪ್ರಸ್ತಾವನೆ:-**

ಮೇಲೆ ಓದಲಾದ ಏಕ ಕಡತದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವಸತಿ ಸಹಿತ ಶಿಕ್ಷಣ ನೀಡುವ ಉದ್ದೇಶದಿಂದ ಜವಾಹಾರ್ ನವೋದಯ ವಸತಿ ಶಾಲೆಗಳ ಮಾದರಿಯಲ್ಲಿ ಕರ್ನಾಟಕದಲ್ಲಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಸಂಘದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ-503, ಪರಿಶಿಷ್ಟ ವರ್ಗ-144 ಹಾಗೂ ಹಿಂದುಳಿದ ವರ್ಗ-174 ಒಟ್ಟು 821 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಸುಮಾರು. 2.15 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ಮತ್ತು ಕುಕನೂರು ತಾಲ್ಲೂಕುಗಳು ಅತ್ಯಂತ ಹಿಂದುಳಿದ ತಾಲ್ಲೂಕುಗಳಾಗಿದ್ದು, ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳೆಂದು ಡಾ||ಡಿ.ಎಂ.ನಂಜುಂಡಪ್ಪ ಸಮಿತಿಯು ವರದಿ ನೀಡಿರುತ್ತದೆ ಮತ್ತು ಕೊಪ್ಪಳ ಜಿಲ್ಲೆ, ಕುಕನೂರು ತಾಲ್ಲೂಕು ಬಳಗೇರಾ ಗ್ರಾಮದಲ್ಲಿ ಜಮೀನು ಲಭ್ಯವಿರುವುದರಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಕೊಪ್ಪಳ ಜಿಲ್ಲೆ, ಕುಕನೂರು ತಾಲ್ಲೂಕು ಬಳಗೇರಾ ಗ್ರಾಮದಲ್ಲಿ ಹೊಸದಾಗಿ ಪರಿಶಿಷ್ಟ ಜಾತಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಂಜೂರು ಮಾಡಲು ಕೋರಿ ಏಕ ಕಡತದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೈಕ್ಷಣಿಕವಾಗಿ ಹಿಂದುಳಿದಿರುವ ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಬಳಗೇರಾ ಗ್ರಾಮದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಹೊಸದಾಗಿ ಮಂಜೂರು

ಮಾಡಲು ಹಾಗೂ ಸದರಿ ವಸತಿ ಶಾಲೆಗೆ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು ವಸತಿ ಶಾಲೆಯನ್ನು ಪ್ರಾರಂಭಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ: ಸಕಇ 108 ಎಂಡಿಎಸ್ 2024, ಬೆಂಗಳೂರು, ದಿನಾಂಕ:04.12.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯ ಕೊಪ್ಪಳ ಜಿಲ್ಲೆ, ಕುಕನೂರು ತಾಲ್ಲೂಕು, ಬಳಗೇರಾ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಹೊಸದಾಗಿ ಮಂಜೂರು ಮಾಡಲು ಹಾಗೂ ಸದರಿ ವಸತಿ ಶಾಲೆಗೆ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು ವಸತಿ ಶಾಲೆಗಳನ್ನು ಪ್ರಾರಂಭಿಸಲು ಅನುಮೋದನ ನೀಡಿ ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 08 ಟಿಎಫ್‌ಪಿ 2023, ದಿನಾಂಕ:28.10.2024 ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ. ಸುಮಿತ್ರ)
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಗಳೂರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ ಇಲಾಖೆ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿಗಳು**:

1. ಸನ್ಮಾನ್ಯ ಮುಖ್ಯಮಂತ್ರಿಯವರ ಅಪರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ
2. ಸನ್ಮಾನ್ಯ ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ,ವಿಧಾನ ಸೌಧ
3. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ

**<u>ಕರ್ನಾಟಕ ಸರ್ಕಾರದ ನಡವಳಿಗಳು</u>**

ವಿಷಯ: 2024-25ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆ, ಕಂಪ್ಲಿ ತಾಲ್ಲೂಕಿನ ಹಂಪದೇವನಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ನೂತನವಾಗಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೂಲಕ ಪ್ರಾರಂಭಿಸಲು ಮಂಜೂರು ಮಾಡುವ ಕುರಿತು.

ಓದಲಾಗಿದೆ: ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಏಕ ಕಡತ ಸಂಖ್ಯೆ: 1506154-KREIS/TECH/OTH/295/2024.

*****

ಪ್ರಸ್ತಾವನೆ:-

ಮೇಲೆ ಓದಲಾದ ಏಕ ಕಡತದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವಸತಿ ಸಹಿತ ಶಿಕ್ಷಣ ನೀಡುವ ಉದ್ದೇಶದಿಂದ ಜವಾಹಾರ್ ನವೋದಯ ವಸತಿ ಶಾಲೆಗಳ ಮಾದರಿಯಲ್ಲಿ ಕರ್ನಾಟಕದಲ್ಲಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಸಂಘದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ-503, ಪರಿಶಿಷ್ಟ ವರ್ಗ-144 ಹಾಗೂ ಹಿಂದುಳಿದ ವರ್ಗ-174 ಒಟ್ಟು 821 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಸುಮಾರು. 2.15 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಬಳ್ಳಾರಿ ಜಿಲ್ಲೆ, ಕಂಪ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಇಲ್ಲದೇ ಇರುವ ಕಾರಣದಿಂದಾಗಿ ಪರಿಶಿಷ್ಟ ಜಾತಿಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿರುವುದರಿಂದ ಕಂಪ್ಲಿ ತಾಲ್ಲೂಕಿನ ಹಂಪದೇವನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಜಮೀನು ಲಭ್ಯವಿರುವುದರಿಂದ ಒಂದು ಹೋಬಳಿಗೆ ಒಂದು ಶಾಲೆಯೆಂದು ಈಗಾಗಲೇ 20 ಶಾಲೆಗಳನ್ನು ಪರಿಗಣಿಸಲಾಗಿದೆ. ಆದ್ದರಿಂದ, ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿ ಪ್ರಸ್ತಾವನೆಯನ್ನು ಪರಿಗಣಿಸುವಂತೆ ಕೋರಿ ಏಕ ಕಡತದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ ಹಂಪದೇವನಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಹೊಸದಾಗಿ ಮಂಜೂರು ಮಾಡಲು ಹಾಗೂ ಸದರಿ ವಸತಿ ಶಾಲೆಗೆ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು ವಸತಿ ಶಾಲೆಯನ್ನು ಪ್ರಾರಂಭಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಕಇ 108 ಎಂಡಿಎಸ್ 2024, ಬೆಂಗಳೂರು, ದಿನಾಂಕ:04.12.2024</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಬಳ್ಳಾರಿ ಜಿಲ್ಲೆ, ಕಂಪ್ಲಿ ತಾಲ್ಲೂಕಿನ ಹಂಪದೇವನಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಹೊಸದಾಗಿ

ಮಂಜೂರು ಮಾಡಲು ಹಾಗೂ ಸದರಿ ವಸತಿ ಶಾಲೆಗೆ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು ವಸತಿ ಶಾಲೆಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಿ ಆದೇಶಿಸಿದೆ

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 08 ಟಿಎಫ್‌ಪಿ 2023, ದಿನಾಂಕ:28.10.2024 ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ. ಸುಮಿತ್ರ)
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಗಳೂರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ ಇಲಾಖೆ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿಗಳು:**

1. ಸನ್ಮಾನ್ಯ ಮುಖ್ಯಮಂತ್ರಿಯವರ ಅಪರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ,
2. ಸನ್ಮಾನ್ಯ ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ,ವಿಧಾನ ಸೌಧ.
3. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶಾವಕಾಶವನ್ನು ನೀಡಲು ಮೀಸಲಾತಿಯನ್ನು ಪರಿಷ್ಕರಿಸುವ ಕುರಿತು.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಸಕಇ 94 ಮೊದೇಶಾ 2020, ದಿನಾಂಕ:19.06.2021 ಮತ್ತು ತಿದ್ದುಪಡಿ ಆದೇಶ ದಿನಾಂಕ:12.11.2021.
2) ಸರ್ಕಾರದ ಆದೇಶ ಸಂಖ್ಯೆ: ಸಕಇ 399 ಎಂಡಿಎಸ್ 2022, ದಿನಾಂಕ: 18.07.2022,
3) ಸರ್ಕಾರದ ಆದೇಶ ಸಂಖ್ಯೆ: ಸಕಇ 399 ಎಂಡಿಎಸ್ 2022, ದಿನಾಂಕ:03.02.2023.
4) ಸರ್ಕಾರದ ಆದೇಶ ಸಂಖ್ಯೆ: ಸಕಇ 399 ಎಂಡಿಎಸ್ 2022, ದಿನಾಮಕ:03.07.2023.
5) ಸರ್ಕಾರದ ಆದೇಶ ಸಂಖ್ಯೆ: ಸಕಇ 399 ಎಂಡಿಎಸ್ 2022, ದಿನಾಂಕ:19.10.2023.
6) ಸರ್ಕಾರದ ಆದೇಶ ಸಂಖ್ಯೆ: ಸಕಇ 399 ಎಂಡಿಎಸ್ 2022, ದಿನಾಂಕ:14.11.2023.

*****

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮಾಂಕ (1) ರ ಆದೇಶದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ 826 ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಡಾ|| ಬಿ.ಆರ್ ಅಂಬೇಡ್ಕರ್/ಅಟಲ್ ಬಿಹಾರಿ ವಾಜಪೇಯಿ/ಶ್ರೀಮತಿ ಇಂದಿರಾಗಾಂಧಿ/ ಏಕಲವ್ಯ ಮಾದರಿ ವಸತಿ ಶಾಲೆ/ಕಾಲೇಜುಗಳ ಪೈಕಿ 800 ವಸತಿ ಶಾಲೆಗಳಿಗೆ 6ನೇ ತರಗತಿಗೆ ಲಭ್ಯವಾಗುವ ಸೀಟುಗಳಿಗೆ ಅನುಗುಣವಾಗಿ ಪ್ರವೇಶ ಕಲ್ಪಿಸಲು ನಿಬಂಧನೆ, ಷರತ್ತು ಮತ್ತು ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿ ಆದೇಶಿಸಲಾಗಿದೆ. ಸದರಿ ಆದೇಶಕ್ಕೆ ದಿನಾಂಕ:12.11.2021 ರಂದು ನಿಬಂಧನೆ/ಷರತ್ತು/ಮಾರ್ಗಸೂಚಿಗಳ ಅಂಶ 9 ಮತ್ತು 10 ಕ್ಕೆ ತಿದ್ದುಪಡಿ ಮಾಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2) ರ ಆದೇಶದಲ್ಲಿ 2022-23 ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ 6 ನೇ ತರಗತಿಗೆ ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಮೀಸಲಾತಿ ನಿಗಧಿಪಡಿಸಿರುವಷ್ಟು ಭರ್ತಿಯಾಗದೆ ಖಾಲಿ ಉಳಿದಿರುವ ಸೀಟುಗಳಿಗೆ ಜಿಲ್ಲಾ ಮತ್ತು ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ವ್ಯಾಪಕ ಪ್ರಚಾರ ನೀಡಿ ಸ್ಥಳೀಯವಾಗಿ ಅರ್ಜಿ ಆಹ್ವಾನಿಸಿ ವಸತಿ ಶಾಲಾ ಮಟ್ಟದಲ್ಲಿ ಆಯಾ ಪ್ರಾಂಶುಪಾಲರುಗಳಿಂದ ಪ್ರವೇಶ ಪರೀಕ್ಷೆ ನಡೆಸಿ ಸಫಾಯಿ ಕರ್ಮಚಾರಿಗಳ ಮಕ್ಕಳನ್ನು ದಾಖಲು ಮಾಡಿಕೊಳ್ಳಲು ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (3) ರ ಆದೇಶದ ದಿನಾಂಕ: 03.02.2023 ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಿಗೆ ಪೌರಕಾರ್ಮಿಕರ/ ಸಫಾಯಿ ಕರ್ಮಚಾರಿ/ ಮ್ಯಾನ್ಯುಯಲ್ ಸ್ಕ್ಯಾವೆಂಜರ್/ ಸ್ಮಶಾನ ಕಾರ್ಮಿಕರ/ ದೇವದಾಸಿ ಈ ಸಮುದಾಯದ ಮಕ್ಕಳಿಗೆ 2023-24 ನೇ ಸಾಲಿನ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (4) ರ ಆದೇಶದ ದಿನಾಂಕ 03.07.2023 ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಿಗೆ ಅಲೆಮಾರಿ, ಅರೆ ಅಲೆಮಾರಿ ಸಮುದಾಯ ಮಕ್ಕಳಿಗೆ 2023-24 ನೇ ಸಾಲಿನ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪರೀಕ್ಷೆಯಿಲ್ಲದೆ ಯಾವುದೇ ವಸತಿ ಶಾಲೆಗಳಿಗೆ ಪ್ರವೇಶ ಕಲ್ಪಿಸಲು ಜಿಲ್ಲಾ ಮತ್ತು ನಗರ ಮತ್ತು ಗ್ರಾಮೀಣ ಸ್ಥಳೀಯವಾಗಿ ವ್ಯಾಪಕ ಪ್ರಚಾರ ನೀಡಿ, ಶಿಕ್ಷಣದ ಅರಿವು ಮೂಡಿಸಿ ದಾಖಲಾತಿ ಮಾಡಿಕೊಳ್ಳಲು ಅನುಮೋದನೆ ನೀಡಿ ಆದೇಶಿಸಲಾಗಿದೆ

ಮೇಲೆ ಓದಲಾದ ಕ್ರಮಾಂಕ (5) ರ ಆದೇಶದ ದಿನಾಂಕ:19.10.2023 ರಲ್ಲಿ ವಾಲ್ಮೀಕಿ ಆಶ್ರಮ ಶಾಲೆಯಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಸತಿ ಶಾಲೆಗಳಿಗೆ ಪ್ರವೇಶ ಪರೀಕ್ಷೆ ಇಲ್ಲದೆ ನೇರವಾಗಿ 6ನೇ ತರಗತಿಗೆ ದಾಖಲಾತಿ ಮಾಡಿಕೊಳ್ಳಲು ಸಂಬಂಧಪಟ್ಟ ಆಶ್ರಮ ಶಾಲೆಯ ಮುಖ್ಯೋಪಧ್ಯಾಯರಿಂದ ವ್ಯಾಸಂಗ ಪ್ರಮಾಣ ಪಡೆಯುವ ಷರತ್ತಿಗೊಳಪಟ್ಟು ಅನುಮೋದನ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (6) ರ ಆದೇಶದ ದಿನಾಂಕ:16.11.2023 ರಲ್ಲಿ ಮ್ಯಾನುಯಲ್ ಸ್ಕ್ಯಾವೆಂಜರ್‌ಗಳ ಮಕ್ಕಳು ಮತ್ತು ಮೊಮ್ಮಕ್ಕಳಿಗೂ ಸಹ ಪ್ರತಿಷ್ಠಿತ ಶಾಲೆಗಳಲ್ಲಿ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ ಪ್ರವೇಶಾವಕಾಶವನ್ನು ಪ್ರಸ್ತುತ ಸಫಾಯಿ ಕರ್ಮಚಾರಿ ಮಕ್ಕಳಿಗೆ ಮೀಸಲಿಟ್ಟಿರುವ ಶೇ.5 ರಷ್ಟು ಸ್ಥಾನಗಳಿಗೆ ಗುರುತಿಸಲ್ಪಟ್ಟ ಮ್ಯಾನುಯಲ್ ಸ್ಕ್ಯಾವೆಂಜರ್ ಮಕ್ಕಳ ಪ್ರಮಾಣ ಪತ್ರ ಮತ್ತು ಸಂಬಂಧ ಪಟ್ಟ ಪ್ರಾಧಿಕಾರಗಳಿಂದ ಮೊಮ್ಮಕ್ಕಳ ವಂಶವೃಕ್ಷ ಪರಿಶೀಲಿಸಿ, ಪ್ರವೇಶಾವಕಾಶವನ್ನು ಕಲ್ಪಿಸಲು ಅನುಮೋದನೆ ನೀಡಿ ಆದೇಶಿಸಲಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಪರಿಶಿಷ್ಟ ಜಾತಿ-503, ಪರಿಶಿಷ್ಟ ವರ್ಗ-156 ಮತ್ತು ಹಿಂದುಳಿದ ವರ್ಗ-174 ಒಟ್ಟಾರೆ 833 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿತ್ತಿವೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 807 ವಸತಿ ಶಾಲೆಗಳಿಗೆ ಪ್ರತಿ ವರ್ಷ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ 41120 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡುತ್ತಿದ್ದು, ವಿಶೇಷ ವರ್ಗದ ಮಕ್ಕಳಿಗೆ 20,000 ಸೀಟುಗಳನ್ನು (50%) ಕಾಯ್ದಿರಿಸಲಾಗಿದೆ ಜೊತೆಗೆ ಶುಲ್ಕ ರಹಿತ, ಸಮವಸ್ತ್ರ, ಲೇಖನ ಸಾಮಗ್ರಿಗಳು ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಉಚಿತವಾಗಿ ಸರ್ಕಾರವು ಒದಗಿಸುತ್ತಿದೆ. 6 ನೇ ತರಗತಿಯ ಪ್ರವೇಶಾತಿಯಲ್ಲಿ ರಾಜ್ಯದ ಎಲ್ಲಾ ತಾಲ್ಲೂಕಿನ ಸ್ಥಳೀಯ ಅಭ್ಯರ್ಥಿಗಳಿಗೆ ಶೇ.75, ಅದೇ ಜಿಲ್ಲೆಯ ಇತರೆ ತಾಲ್ಲೂಕಿನ ಅಭ್ಯರ್ಥಿಗಳಿಗೆ ಶೇ.25 ರಷ್ಟು ಮೀಸಲಾತಿ ನೀಡಲಾಗಿರುತ್ತದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಾತಿಗೆ ಸಂಬಂಧಿಸಿದಂತೆ ಹಿಂದಿನ ಆದೇಶಗಳ ಮೀಸಲಾತಿಯನ್ನು ಪರಿಶೀಲಿಸಿ, ವಿಶೇಷ ವರ್ಗಗಳಿಗೆ ಈ ಕೆಳಕಂಡಂತೆ ಮೀಸಲಾತಿಯನ್ನು ಪರಿಷ್ಕರಿಸಲು ನಿರ್ಧರಿಸಿದೆ.

| ಕ್ರ. ಸಂ | ವರ್ಗ | ಶೇಕಡ ವಾರು ಹಂಚಿಕೆ |
|---|---|---|
| 1 | ಸಫಾಯಿ ಕರ್ಮಚಾರಿ/ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್/ ಚಿಂದಿ ಆಯುವವರು/ಸ್ಮಶಾನ ಕಾರ್ಮಿಕರ ಮಕ್ಕಳು. | 10% |
| 2 | ಬಾಲ ಕಾರ್ಮಿಕರು/ಜೀತ ವಿಮುಕ್ತ ಕಾರ್ಮಿಕರ ಮಕ್ಕಳು /ಗುರುತಿಸಿರುವ ಮಾಜಿ ದೇವದಾಸಿಯರ ಮಕ್ಕಳು. | 10% |

| | | |
|---|---|---|
| 3 | 25% ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು/ಎಚ್‌ಐವಿಗೆ ತುತ್ತಾದ ಪೋಷಕರ ಮಕ್ಕಳು, ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳು. | 10% |
| 4 | ಗುರುತಿಸಿರುವ ಅಲೆಮಾರಿ/ಅರೆ ಅಲೆಮಾರಿ/ಸೂಕ್ಷ್ಮ-ಅತಿ ಸೂಕ್ಷ್ಮ ಸಮುದಾಯದ/ಸೈನಿಕರು ಮತ್ತು ಮಾಜಿ ಸೈನಿಕರು/ಸರ್ಕಾರಿ ಯೋಜನೆಗಳಿಂದ ಸ್ಥಳಾಂತರ ಗೊಂಡ ಪೋಷಕರ ಮಕ್ಕಳು. | 10% |
| 5 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಆಶ್ರಮ ವಸತಿ ಶಾಲೆಗಳಲ್ಲಿ 5 ನೇ ತರಗತಿಯಲ್ಲಿ ಉತ್ತೀರ್ಣರಾದ ಮಕ್ಕಳು. | 10% |

ಮೇಲ್ಕಂಡ ವಿಶೇಷ ವರ್ಗಗಳ ಮಕ್ಕಳಿಗೆ ಉತ್ಕೃಷ್ಟ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಶಿಕ್ಷಣದ ಬಗ್ಗೆ ಅರಿವು ಮೂಡಿಸಿ, ಮೀಸಲಾತಿಯನ್ನು ಕಲ್ಪಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಕಇ 399 ಎಂಡಿಎಸ್ 2022, ಬೆಂಗಳೂರು, ದಿನಾಂಕ:15.03.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಬರುವ 807 ವಸತಿ ಶಾಲೆಗಳಿಗೆ ಈ ಕೆಳಕಂಡಂತೆ ವಿಶೇಷ ವರ್ಗಗಳಿಗೆ ಮೀಸಲಾತಿಯನ್ನು ನಿಗಧಿಪಡಿಸಿ, 6ನೇ ತರಗತಿಗೆ ಪ್ರವೇಶ ಕಲ್ಪಿಸಲು ಅನುಮೋದನೆ ನೀಡಿ ಆದೇಶಿಸಿದೆ.

| ಕ್ರ. ಸಂ | ವರ್ಗ | ಶೇಕಡ ವಾರು ಹಂಚಿಕೆ |
|---|---|---|
| 1 | ಸಫಾಯಿ ಕರ್ಮಚಾರಿ/ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್/ ಚಿಂದಿ ಆಯುವವರು/ಸ್ಮಶಾನ ಕಾರ್ಮಿಕರ ಮಕ್ಕಳು. | 10% |
| 2 | ಬಾಲ ಕಾರ್ಮಿಕರು/ಜೀತ ವಿಮುಕ್ತ ಕಾರ್ಮಿಕರ ಮಕ್ಕಳು /ಗುರುತಿಸಿರುವ ಮಾಜಿ ದೇವದಾಸಿಯರ ಮಕ್ಕಳು. | 10% |
| 3 | 25% ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು/ಎಚ್‌ಐವಿಗೆ ತುತ್ತಾದ ಪೋಷಕರ ಮಕ್ಕಳು, ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳು. | 10% |
| 4 | ಗುರುತಿಸಿರುವ ಅಲೆಮಾರಿ/ಅರೆ ಅಲೆಮಾರಿ/ಸೂಕ್ಷ್ಮ-ಅತಿ ಸೂಕ್ಷ್ಮ ಸಮುದಾಯದ/ಸೈನಿಕರು ಮತ್ತು ಮಾಜಿ ಸೈನಿಕರು/ಸರ್ಕಾರಿ ಯೋಜನೆಗಳಿಂದ ಸ್ಥಳಾಂತರ ಗೊಂಡ ಪೋಷಕರ ಮಕ್ಕಳು. | 10% |
| 5 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಆಶ್ರಮ ವಸತಿ ಶಾಲೆಗಳಲ್ಲಿ 5 ನೇ ತರಗತಿಯಲ್ಲಿ ಉತ್ತೀರ್ಣರಾದ ಮಕ್ಕಳು. | 10% |

ಷರತ್ತುಗಳು:

1) ಮೊದಲು ಅರ್ಜಿ ಸಲ್ಲಿಸಿರುವಂತಹವರಿಗೆ ಮೊದಲ ಆದ್ಯತೆ ಮೇಲೆ ಪ್ರವೇಶಾತಿ ನೀಡುವುದು.

2) ಸರ್ಕಾರದ ಆದೇಶ ಸಂಖ್ಯೆ. ಸಕಇ 94 ಮೊದೇಶಾ 2020, ದಿನಾಂಕ:19.06.2021 ಹಾಗೂ ತಿದ್ದುಪಡಿ ಆದೇಶ ದಿನಾಂಕ:12.11.2021 ರಲ್ಲಿರುವ ನಿಬಂಧನೆ/ಷರತ್ತು/ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.
3) ಪ್ರವೇಶಾತಿ ಸಂದರ್ಭದಲ್ಲಿ ಮೇಲ್ಕಂಡ ವರ್ಗಗಳಲ್ಲಿ ಯಾವುದಾದರು ವರ್ಗದಲ್ಲಿ ಸೀಟುಗಳು ಖಾಲಿ ಉಳಿದಲ್ಲಿ ಉಳಿದ ವರ್ಗಗಳ ಅರ್ಜಿಗಳನ್ನು ಪರಿಗಣಿಸುವುದು.
4) ಪ್ರವೇಶಾತಿ ನೀಡುವ ಸಂದರ್ಭದಲ್ಲಿ ಪಾರದರ್ಶಕತೆ ಕಾಪಾಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ. ಸುಮಿತ್ರ)
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
5. ನಿರ್ದೇಶಕರು, ಪರಿಶಿಷ್ಟ ಪಂಡಗಳ ಕಲ್ಯಾಣ ಇಲಾಖೆ, ಬೆಂಗಳೂರು.
6. ಎಲ್ಲಾ ಜಿಲ್ಲಾಧಿಕಾರಿಗಳು.
7. ಎಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್.
8. ಎಲ್ಲಾ ಜಿಲ್ಲೆಗಳ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
9. ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
10. ಎಲ್ಲಾ ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿಗಳು.
11. ಖಜನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿಗಳು:

1. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವಜನ ಸಬಲೀಕರಣ, ಕ್ರೀಡಾ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
3. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
6. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ವ್ಯಾಪ್ತಿಯಲ್ಲಿನ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಾತಿಗೆ ರಾಜ್ಯದ ಎಲ್ಲಾ ತಾಲ್ಲೂಕಿನ ಸ್ಥಳೀಯ ಅಭ್ಯರ್ಥಿಗಳಿಗೆ ಶೇ.75 ರಷ್ಟು ಅದೇ ಜಿಲ್ಲೆಯ ಇತರೆ ತಾಲ್ಲೂಕಿನ ಅಭ್ಯರ್ಥಿಗಳಿಗೆ ಶೇ 25 ರಷ್ಟು ಮೀಸಲಾತಿ ನೀಡುವ ಕುರಿತು.

**ಓದಲಾಗಿದೆ:** 1). ಸರ್ಕಾರದ ಆದೇಶ ಸಂಖ್ಯೆ: ಸಕಇ-ಎಂಡಿಎಸ್/78/2023, ದಿನಾಂಕ:30.08.2023 ಮತ್ತು 10.01.2024.

2). ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಏಕ ಕಡತ ಸಂಖ್ಯೆ: 1216279: KREIS/ EDN/ENT/12/2023.

******

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ:30.08.2023ರ ಆದೇಶದಲ್ಲಿ 2024-25ನೇ ಸಾಲಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿನ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಾತಿಯಲ್ಲಿ ಆಯಾ ತಾಲ್ಲೂಕಿನ ಸ್ಥಳೀಯ ಅಭ್ಯರ್ಥಿಗಳಿಗೆ ಶೇ.60 ರಷ್ಟು ಸೀಟುಗಳನ್ನು ಹೆಚ್ಚಿಸಿ ಮೀಸಲಿಟ್ಟು, ಪ್ರವೇಶಾವಕಾಶ ಕಲ್ಪಿಸಲು ಆದೇಶಿಸಲಾಗಿದೆ ಹಾಗೂ ದಿನಾಂಕ:10.01.2024 ರ ಆದೇಶದಲ್ಲಿ "ಡಾ|| ಡಿ.ಎಂ. ನಂಜುಂಡಪ್ಪ ಸಮಿತಿ"ಯ ವರದಿಯಲ್ಲಿರುವ ರಾಜ್ಯದ ಹಿಂದುಳಿದ 39 ತಾಲ್ಲೂಕಿನ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಾತಿಯಲ್ಲಿ ಸ್ಥಳೀಯ ತಾಲ್ಲೂಕಿಗೆ ಶೇ.75 ರಷ್ಟು ಮತ್ತು ರಾಜ್ಯದ ಉಳಿದ ಭಾಗಗಳಿಗೆ ಶೇ.25 ರಷ್ಟು ಮೀಸಲಾತಿಯ ಮೂಲಕ ಭರ್ತಿ ಮಾಡಿಕೊಳ್ಳಲು ಸ್ಥಳೀಯ ಅಭ್ಯರ್ಥಿಯ ಪ್ರಮಾಣ ಪತ್ರ ಪಡೆಯುವ ಷರತ್ತಿಗೊಳಪಟ್ಟು ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2) ರಲ್ಲಿ ಏಕ ಕಡತದಲ್ಲಿ ದಿನಾಂಕ:22.01.2024 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಾತಿಯ ಕುರಿತು ಪ್ರಸ್ತಾಪಿಸಲಾಗಿ, 2024-25ನೇ ಸಾಲಿನ 6ನೇ ತರಗತಿ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭವಾಗಿರುವುದರಿಂದ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿಯೂ ಸ್ಥಳೀಯ ಅಭ್ಯರ್ಥಿಗಳಿಗೆ ಒಂದೇ ಮಾದರಿಯ ಮೀಸಲಾತಿ ಕಲ್ಪಿಸುವ ಸಂಬಂಧ ಸ್ಥಳೀಯ ಅಭ್ಯರ್ಥಿಗಳಿಗೆ ಶೇ 75 ರಷ್ಟು ಹಾಗೂ ಅದೇ ಜಿಲ್ಲೆಯ ಇತರೆ ತಾಲ್ಲೂಕಿನ ಅಭ್ಯರ್ಥಿಗಳಿಗೆ ಶೇ 25 ರಷ್ಟು ಮೀಸಲಾತಿಯನ್ನು ಹಂಚಿಕೆ ಮಾಡಲು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಕಇ -ಎಂಡಿಎಸ್/78/2023(P-1), ಬೆಂಗಳೂರು, ದಿನಾಂಕ:12.02.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಾತಿಯಲ್ಲಿ ರಾಜ್ಯದ ಎಲ್ಲಾ ತಾಲ್ಲೂಕಿನ ಸ್ಥಳೀಯ ಅಭ್ಯರ್ಥಿಗಳಿಗೆ ಶೇ.75 ರಷ್ಟು ಹಾಗೂ

ಅದೇ ಜಿಲ್ಲೆಯ ಇತರ ತಾಲ್ಲೂಕಿನ ಅಭ್ಯರ್ಥಿಗಳಿಗೆ ಶೇ 25 ರಷ್ಟು ಮೀಸಲಾತಿಯನ್ನು ಹಂಚಿಕೆ ಮಾಡಲು ಸ್ಥಳೀಯ ಅಭ್ಯರ್ಥಿಯ ಪ್ರಮಾಣ ಪತ್ರ ಪಡೆಯುವ ಷರತ್ತಿಗೊಳಪಟ್ಟು ಅನುಮೋದನ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮೇಜರ್ ಮಣಿವಣ್ಣನ್ .ಪಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ:-**

1) ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
3) ಖಜಾನಾಧಿಕಾರಿಗಳು ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

**ಪ್ರತಿಗಳು:**

1) ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ ವಿಧಾನಸೌಧ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ.

ಅನುಬಂಧ- ೪

ಅನುಬಂಧ-01

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 161 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು, ಡಾ॥ ಎ ಪಿ ಜೆ ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳ ವಿವರ

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಸ್ಥಳ | ವಸತಿ ಶಾಲೆ/ಕಾಲೇಜುಗಳು |
|---|---|---|---|---|---|
| | ಬೆಂಗಳೂರು ಗ್ರಾಮಾಂತರ | [illegible] | ದೇವನಹಳ್ಳಿ | ದೇವನಾಯಕನಹಳ್ಳಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೆಂಗಳೂರು ಗ್ರಾಮಾಂತರ | 2 | ಹೊಸಕೋಟೆ | ಗಿಡ್ಡಪ್ಪನಹಳ್ಳಿ | ಡಾ॥ ಎ ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಬಾಗಲಕೋಟೆ | 3 | ಬಾಗಲಕೋಟೆ | ನವನಗರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬಾಗಲಕೋಟೆ | 4 | ಜಮಖಂಡಿ | ಜಮಖಂಡಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬಾಗಲಕೋಟೆ | 5 | ರಬಕವಿ-ಬನಹಟ್ಟಿ | ತೇರದಾಳ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬಾಗಲಕೋಟೆ | 6 | ಹುನಗುಂದ | ಹುನಗುಂದ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| 2 | ಬಾಗಲಕೋಟೆ | 7 | ಬೀಳಗಿ | ಬೀಳಗಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬಾಗಲಕೋಟೆ | 8 | ಗುಳೇದಗುಡ್ಡ | ಗುಳೇದಗುಡ್ಡ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬಾಗಲಕೋಟೆ | 9 | ಬಾಗಲಕೋಟೆ | ಬಾಗಲಕೋಟೆ ನಗರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಬಾಗಲಕೋಟೆ | 10 | ಬಾಗಲಕೋಟೆ | ನವನಗರ | ಡಾ॥ ಎ ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಬಾಗಲಕೋಟೆ | 11 | ಮುಧೋಳ | ಮುಧೋಳ (ತಿಮ್ಮಾಪುರ) | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬಳ್ಳಾರಿ | 12 | ಕಂಪ್ಲಿ | ಕಂಪ್ಲಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬಳ್ಳಾರಿ | 13 | ಸಂಡೂರು | ತೋರಣಗಲ್ಲು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| 3 | ಬಳ್ಳಾರಿ | 14 | ಬಳ್ಳಾರಿ | ಬಳ್ಳಾರಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬಳ್ಳಾರಿ | 15 | ಬಳ್ಳಾರಿ | ಕೊಳಗಲ್ಲು | ಡಾ॥ ಎ ಪಿ ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಬಳ್ಳಾರಿ | 6 | ಕುರಗೋಡು | ಕುರಗೋಡು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಸ್ಥಳ | ವಸತಿ ಶಾಲೆ/ಕಾಲೇಜುಗಳು |
|---|---|---|---|---|---|
| 4 | ಬೆಳಗಾವಿ | 17 | ಚಿಕ್ಕೋಡಿ | ಯಕಸಂಬ ಗ್ರಾಮ. (ಯಡನವಾಡಿ) | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೆಳಗಾವಿ | 18 | ಬೆಳಗಾವಿ | ರಾಮತೀರ್ಥ ನಗರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೆಳಗಾವಿ | 19 | ರಾಮದುರ್ಗ | ರಾಮದುರ್ಗ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೆಳಗಾವಿ | 20 | ಕಾಗವಾಡ | ಐನಾಪುರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೆಳಗಾವಿ | 21 | ಮೂಡಲಗಿ | ಮೂಡಲಗಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೆಳಗಾವಿ | 22 | ಸವದತ್ತಿ | ಸವದತ್ತಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೆಳಗಾವಿ | 23 | ಚಿಕ್ಕೋಡಿ | ಚಿಕ್ಕೋಡಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಬೆಳಗಾವಿ | 24 | ಕಿತ್ತೂರ | ಹೂಲಿಕಟ್ಟಿ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಬೆಳಗಾವಿ | 25 | ಅಥಣಿ | ಅಥಣಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೆಳಗಾವಿ | 26 | ಗೋಕಾಕ | ಗೋಕಾಕ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೆಳಗಾವಿ | 27 | ಬೆಳಗಾವಿ | ಹಿರೇಬಾಗೇವಾಡಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| 5 | ಬೀದರ್ | 28 | ಬೀದರ್ | ಬಂಬಳಗಿ ಗ್ರಾಮ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೀದರ್ | 29 | ಹುಮನಾಬಾದ್ | ಹುಮನಾಬಾದ್ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೀದರ್ | 30 | ಬೀದರ್ ಉತ್ತರ | ಬೀದರ್ ಟೌನ್ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಬೀದರ್ | 31 | ಬೀದರ್ | ಮೀರಾಗಂಜ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಬೀದರ | 32 | ಬೀದರ | ಕಪಲಾಪುರ-ಎ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಬೀದರ | 33 | ಭಾಲ್ಕಿ | ಭಾಲ್ಕಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| 6 | ಚಾಮರಾಜನಗರ | 34 | ಗುಂಡ್ಲುಪೇಟೆ | ಗುಂಡ್ಲುಪೇಟೆ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಸ್ಥಳ | ವಸತಿ ಶಾಲೆ/ಕಾಲೇಜುಗಳು |
|---|---|---|---|---|---|
| 7 | ಚಿಕ್ಕಬಳ್ಳಾಪುರ | 35 | ಚಿಕ್ಕಬಳ್ಳಾಪುರ | ಪೆರೇಸಂದ್ರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಚಿಕ್ಕಬಳ್ಳಾಪುರ | 36 | ಬಾಗೇಪಲ್ಲಿ | ಬಾಗೇಪಲ್ಲಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಚಿಕ್ಕಬಳ್ಳಾಪುರ | 37 | ಚಿಂತಾಮಣಿ | ಮಸ್ತೇನಹಳ್ಳಿ, ಕೈವಾರ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| 8 | ಚಿಕ್ಕಮಗಳೂರು | 38 | ಕಡೂರು | ಗೆದ್ಲೇಹಳ್ಳಿ, ಬೀರೂರುನಗರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಚಿಕ್ಕಮಗಳೂರು | 39 | ಚಿಕ್ಕಮಗಳೂರು | ತೇಗೂರು | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| 9 | ಚಿತ್ರದುರ್ಗ | 40 | ಹಿರಿಯೂರು | ದೇವರಕೊಟ್ಟ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಚಿತ್ರದುರ್ಗ | 41 | ಚೆಳ್ಳಕೆರೆ | ಚೆಳ್ಳಕೆರೆ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಚಿತ್ರದುರ್ಗ | 42 | ಹಿರಿಯೂರು | ಹಿರಿಯೂರು ಟೌನ್ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಚಿತ್ರದುರ್ಗ | 43 | ಚಿತ್ರದುರ್ಗ | ಚಿತ್ರದುರ್ಗ ಟೌನ್ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಚಿತ್ರದುರ್ಗ | 44 | ಚಿತ್ರದುರ್ಗ | ಮೆದೇಹಳ್ಳಿ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| 10 | ದಕ್ಷಿಣ ಕನ್ನಡ | 45 | ಮಂಗಳೂರು | ಅಸೈಮದಕ | ಸರ್ಕಾರಿ ಮುಸ್ಲಿಂ ವಸತಿ ಶಾಲೆ |
| | ದಕ್ಷಿಣ ಕನ್ನಡ | 46 | ಮಂಗಳೂರು | ಕೊಣಾಜೆ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| 11 | ದಾವಣಗೆರೆ | 47 | ಚನ್ನಗಿರಿ | ಕೆರೆಬಿಳಚಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ದಾವಣಗೆರೆ | 48 | ದಾವಣಗೆರೆ | ಹೊಸಕುಂದುವಾಡ, ನಿಜಲಿಂಗಪ್ಪ ಬಡಾವಣೆ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ದಾವಣಗೆರೆ | 49 | ದಾವಣಗೆರೆ | ಜಗಳೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ದಾವಣಗೆರೆ | 50 | ಹೊನ್ನಾಳಿ | ನ್ಯಾಮತಿ, ಕೊಡಚಗೊಂಡನಹ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ದಾವಣಗೆರೆ | 51 | ಹರಿಹರ | ಕೊಂಡಜ್ಜಿ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ದಾವಣಗೆರೆ | 52 | ಚನ್ನಗಿರಿ | ಬಸವಪಟ್ಟಣ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಸ್ಥಳ | ವಸತಿ ಶಾಲೆ/ಕಾಲೇಜುಗಳು |
|---|---|---|---|---|---|
| 12 | ಧಾರವಾಡ | 53 | ಹುಬ್ಬಳ್ಳಿ | ಅಂಚಟಗೆರಿ-02 (ಸಿದ್ಧಾರೂಡಮಠ) | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಧಾರವಾಡ | 54 | ಧಾರವಾಡ | ಧಾರವಾಡ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಧಾರವಾಡ | 55 | ಧಾರವಾಡ ಗ್ರಾಮಾಂತರ | ಶಿಂಗೇನಹಳ್ಳಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಧಾರವಾಡ | 56 | ಹುಬ್ಬಳ್ಳಿ | ಅಂಚಟಗೇರಿ-01 | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಧಾರವಾಡ | 57 | ನವಲಗುಂದ | ನವಲಗುಂದ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಧಾರವಾಡ | 58 | ಧಾರವಾಡ | ಧಾರವಾಡ ಗ್ರಾಮೀಣ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| 13 | ಗದಗ | 59 | ಗದಗ | ಮಲ್ಲಸಮುದ್ರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಗದಗ | 60 | ಮುಂಡರಗಿ | ಮುಂಡರಗಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಗದಗ | 61 | ಗದಗ | ಗದಗ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಗದಗ | 62 | ಗದಗ | ಜಿಲ್ಲಾ ಆಸ್ಪತ್ರೆ ಹಿಂದುಗಡೆ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಗದಗ | 63 | ರೋಣ | ರೋಣ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| 14 | ಹಾಸನ | 64 | ಹೊಳೇನರಸಿಪುರ | ಹೊಳೇನರಸಿಪುರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಹಾಸನ | 65 | ಅರಕಲಗೂಡು | ಅರಕಲಗೂಡು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಹಾಸನ | 66 | ಅರಸೀಕೆರೆ | ರಂಗಪುರಕಾವಲು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಹಾಸನ | 67 | ಚೆನ್ನರಾಯಪಟ್ಟಣ | ಚೆನ್ನರಾಯಪಟ್ಟಣ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಹಾಸನ | 68 | ಹಾಸನ | ಹಾಲುವಾಗಿಲು | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಸ್ಥಳ | ವಸತಿ ಶಾಲೆ/ಕಾಲೇಜುಗಳು |
|---|---|---|---|---|---|
| 15 | ಹಾವೇರಿ | 69 | ಹಾವೇರಿ | ಕರ್ಜಗಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಹಾವೇರಿ | 70 | ಹಾವೇರಿ | ಭೂವೀರಾಪುರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಹಾವೇರಿ | 71 | ಹಾನಗಲ್ | ಅಕ್ಕಿ ಆಲೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಹಾವೇರಿ | 72 | ರಾಣೆಬೆನ್ನೂರು | ರಾಣೆಬೆನ್ನೂರು. ಸುಣಕಲ್ ಬಿದರಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಹಾವೇರಿ | 73 | ಬ್ಯಾಡಗಿ | ಬ್ಯಾಡಗಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಹಾವೇರಿ | 74 | ಹಾನಗಲ್ | ಹಾನಗಲ್ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಹಾವೇರಿ | 75 | ಹಾವೇರಿ | ಹಾವೇರಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಹಾವೇರಿ | 76 | ಹಾವೇರಿ | ಭೂವೀರಾಪುರ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಹಾವೇರಿ | 77 | ಹಾನಗಲ್ | ಹಾನಗಲ್, ಬ್ಯಾತನಾಳ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಹಾವೇರಿ | 78 | ಶಿಗ್ಗಾಂವ್ | ಸವಣೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಹಾವೇರಿ | 79 | ಹಿರೇಕೆರೂರು | ಹಿರೇಕೆರೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| 16 | ಕೊಡಗು | 80 | ವಿರಾಜಪೇಟೆ | ಪಂಜಾರ್‌ಪೇಟೆ, ಅರ್ಜಿ ಗ್ರಾಮ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೊಡಗು | 81 | ಸೋಮವಾರಪೇಟೆ | ಕ್ಯಾತೆ ಗ್ರಾಮ, ಕೊಡ್ಲಿಪೇಟೆ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| 17 | ಕೋಲಾರ | 82 | ಮುಳಬಾಗಿಲು | ಬಾಳಸಂದ್ರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೋಲಾರ | 83 | ಕೋಲಾರ | ಕೋಲಾರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೋಲಾರ | 84 | ಕೋಲಾರ | ಕೋಲಾರ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಸ್ಥಳ | ವಸತಿ ಶಾಲೆ/ಕಾಲೇಜುಗಳು |
|---|---|---|---|---|---|
| 18 | ಕಲಬುರಗಿ | 85 | ಜೇವರ್ಗಿ | ಯಳವರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕಲಬುರಗಿ | 86 | ಕಲಬುರ್ಗಿ | ಹಾಗರಗ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕಲಬುರಗಿ | 87 | ಚಿತ್ತಾಪುರ | ದಂಡೋತಿ ಗ್ರಾಮ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕಲಬುರಗಿ | 88 | ಚಿತ್ತಾಪುರ | ವಾಡಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕಲಬುರಗಿ | 89 | ಚಿಂಚೋಳಿ | ಚಿಂಚೋಳಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕಲಬುರಗಿ | 90 | ಆಳಂದ | ಆಳಂದ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕಲಬುರಗಿ | 91 | ಕಲಬುರ್ಗಿ | ಸಾವಳಗಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕಲಬುರಗಿ | 92 | ಸೇಡಂ | ಸೇಡಂ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕಲಬುರಗಿ | 93 | ಅಫಜಲ್‌ಪುರ | ಅಫಜಲ್‌ಪುರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕಲಬುರಗಿ | 94 | ಜೇವರ್ಗಿ | ಜೇವರ್ಗಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕಲಬುರಗಿ | 95 | ಕಲಬುರಗಿ | ಸಾವಳಗಿ | ಸರ್ಕಾರಿ ಮುಸ್ಲಿಂ ವಸತಿ ಶಾಲೆ |
| | ಕಲಬುರಗಿ | 96 | ಕಲಬುರಗಿ | ಕಲಬುರಗಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಕಲಬುರಗಿ | 97 | ಚಿತ್ತಾಪುರ | ಚಿತ್ತಾಪುರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಕಲಬುರಗಿ | 98 | ಕಲಬುರಗಿ | ಕಲಬುರಗಿ | ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಕಲಬುರಗಿ | 99 | ಯಡ್ರಾಮಿ | ಮಲ್ಲಿ. ಯಡ್ರಾಮಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕಲಬುರಗಿ | 100 | ಕಲಬುರಗಿ | ಕಲಬುರಗಿ ನಗರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಸ್ಥಳ | ವಸತಿ ಶಾಲೆ/ಕಾಲೇಜುಗಳು |
|---|---|---|---|---|---|
| 19 | ಕೊಪ್ಪಳ | 101 | ಕೊಪ್ಪಳ | ಟಣಕನಕಲ್ಲು, ಕುಷ್ಟಗಿ ಮುಖ್ಯ ರಸ್ತೆ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೊಪ್ಪಳ | 102 | ಕೂಕನೂರು | ಕುದುರೆಮೋತಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೊಪ್ಪಳ | 103 | ಕೂಕನೂರು | ಕೂಕನೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೊಪ್ಪಳ | 104 | ಯಲಬುರ್ಗಾ | ತಳಕಲ್ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೊಪ್ಪಳ | 105 | ಗಂಗಾವತಿ | ಹಿರೇಬೆಣಕಲ್-01 | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೊಪ್ಪಳ | 106 | ಗಂಗಾವತಿ | ಹಿರೇಬೆಣಕಲ್-02 | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೊಪ್ಪಳ | 107 | ಕುಷ್ಟಗಿ | ಕುಷ್ಟಗಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೊಪ್ಪಳ | 108 | ಯಲಬುರ್ಗಾ | ಯಲಬುರ್ಗಾ, ಮುಧೋಳ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೊಪ್ಪಳ | 109 | ಕೊಪ್ಪಳ | ಕೊಪ್ಪಳ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಕೊಪ್ಪಳ | 110 | ಯಲಬುರ್ಗಾ | ಯಲಬುರ್ಗಾ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಕೊಪ್ಪಳ | 111 | ಗಂಗಾವತಿ | ಗಂಗಾವತಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ಕೊಪ್ಪಳ | 112 | ಕೊಪ್ಪಳ | ಕೊಪ್ಪಳ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಕೊಪ್ಪಳ | 113 | ಕನಕಗಿರಿ | ಕನಕಗಿರಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಕೊಪ್ಪಳ | 114 | ಕೊಪ್ಪಳ | ಹಿಟ್ನಾಳ್ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| 20 | ಮಂಡ್ಯ | 115 | ಶ್ರೀರಂಗಪಟ್ಟಣ | ಶ್ರೀರಂಗಪಟ್ಟಣ | ಸರ್ಕಾರಿ ಮುಸ್ಲಿಂ ವಸತಿ ಶಾಲೆ |
| | ಮಂಡ್ಯ | 116 | ಕೆ.ಆರ್.ಪೇಟೆ | ಆದಿಹಳ್ಳಿ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಸ್ಥಳ | ವಸತಿ ಶಾಲೆ/ಕಾಲೇಜುಗಳು |
|---|---|---|---|---|---|
| 21 | ಮೈಸೂರು | 117 | ಪಿರಿಯಾಪಟ್ಟಣ | ಹಲಗನಹಳ್ಳಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಮೈಸೂರು | 118 | ಟಿ.ನರಸೀಪುರ | ಟಿ.ನರಸೀಪುರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಮೈಸೂರು | 119 | ಮೈಸೂರು | ದೊಡ್ಡಕಾನ್ಯ | ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| 22 | ರಾಯಚೂರು | 120 | ರಾಯಚೂರು | ಮಾನ್ವಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ರಾಯಚೂರು | 121 | ರಾಯಚೂರು | ಬೋಳಮ್ಮನದೊಡ್ಡಿ ರಸ್ತೆ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ರಾಯಚೂರು | 122 | ರಾಯಚೂರು | ಗಿಲ್ಲಸೂಗೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ರಾಯಚೂರು | 123 | ರಾಯಚೂರು | ಯರಮರೇಸ್ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ರಾಯಚೂರು | 124 | ಸಿಂಧನೂರು | ಸಿಂಧನೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ರಾಯಚೂರು | 125 | ಲಿಂಗಸೂಗೂರು | ಲಿಂಗಸೂಗೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ರಾಯಚೂರು | 126 | ರಾಯಚೂರು | ರಾಯಚೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು |
| | ರಾಯಚೂರು | 127 | ರಾಯಚೂರು | ಯರಮರಸ್ | ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ರಾಯಚೂರು | 128 | ರಾಯಚೂರು | ರಾಯಚೂರು ಗ್ರಾಮಾಂತರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ರಾಯಚೂರು | 129 | ದೇವದುರ್ಗ | ದೇವದುರ್ಗ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| 23 | ರಾಮನಗರ | 130 | ಚನ್ನಪಟ್ಟಣ | ಹೊನ್ನಾಯಕನಹಳ್ಳಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ರಾಮನಗರ | 131 | ಮಾಗಡಿ | ಯಲ್ಲಾಪುರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ರಾಮನಗರ | 132 | ರಾಮನಗರ | ಪಿ.ಎಸ್.ವಿ.ನಗರ | ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| 24 | ಉತ್ತರ ಕನ್ನಡ | 133 | ದಾಂಡೇಲಿ | ಅಂಬೇವಾಡಿ | ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| 25 | ಉಡುಪಿ | 134 | ಬೈಂದೂರು | ಬೈಂದೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಸ್ಥಳ | ವಸತಿ ಶಾಲೆ/ಕಾಲೇಜುಗಳು |
|---|---|---|---|---|---|
| 26 | ವಿಜಯನಗರ | 135 | ಹರಪ್ಪನಹಳ್ಳಿ | ಹರಪ್ಪನಹಳ್ಳಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ವಿಜಯನಗರ | 136 | ಹೊಸಪೇಟೆ | ತಾಯಕನಹಳ್ಳಿ ಪೋಸ್ಟ್ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ವಿಜಯನಗರ | 137 | ಹೊಸಪೇಟೆ | ಹೊಸಪೇಟೆ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ವಿಜಯನಗರ | 138 | ಹೊಸಪೇಟೆ | ಮರಿಯಮ್ಮನಹಳ್ಳಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| 27 | ತುಮಕೂರು | 139 | ಕುಣಿಗಲ್ | ವಳಗೇರೆಪುರ ಕಾಲೋನಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ತುಮಕೂರು | 140 | ಮಧುಗಿರಿ | ಶ್ರಾವಂಡನಹಳ್ಳಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ತುಮಕೂರು | 141 | ಮಧುಗಿರಿ | ಕಾರೇನಹಳ್ಳಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ತುಮಕೂರು | 142 | ತುಮಕೂರು | ತುಮಕೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಹೆಣ್ಣು ಮಕ್ಕಳ ವಸತಿ ಶಾಲೆ |
| | ತುಮಕೂರು | 143 | ತಿಪಟೂರು | ತಿಪಟೂರು | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ತುಮಕೂರು | 144 | ಶಿರಾ | ಭುವನಹಳ್ಳಿ, ಶಿರಾ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| 28 | ಶಿವಮೊಗ್ಗ | 145 | ಶಿರಾಳಕೊಪ್ಪ | ಉಡುಗಣಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಶಿವಮೊಗ್ಗ | 146 | ಭದ್ರಾವತಿ | ಭದ್ರಾವತಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಶಿವಮೊಗ್ಗ | 147 | ಶಿಕಾರಿಪುರ | ಶಿಕಾರಿಪುರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಶಿವಮೊಗ್ಗ | 148 | ಶಿವಮೊಗ್ಗ | ಮೇಲಿನಹನಸವಾಡಿ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಶಿವಮೊಗ್ಗ | 149 | ಸಾಗರ | ಸಾಗರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಸ್ಥಳ | ವಸತಿ ಶಾಲೆ/ಕಾಲೇಜುಗಳು |
|---|---|---|---|---|---|
| 29 | ವಿಜಯಪುರ | 150 | ಇಂಡಿ | ಚಡಚಣ, ಹಲಹಳ್ಳಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ವಿಜಯಪುರ | 151 | ಮುದ್ದೇಬಿಹಾಳ | ಮುದ್ದೇಬಿಹಾಳ-01 | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ವಿಜಯಪುರ | 152 | ಇಂಡಿ | ಇಂಡಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ವಿಜಯಪುರ | 153 | ಸಿಂಧಗಿ | ಸಿಂಧಗಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ವಿಜಯಪುರ | 154 | ಮುದ್ದೇಬಿಹಾಳ | ಮುದ್ದೇಬಿಹಾಳ-02 | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ವಿಜಯಪುರ | 155 | ವಿಜಯಪುರ | ವಿಜಯಪುರ | ಸರ್ಕಾರಿ ಮುಸ್ಲಿಂ ವಸತಿ ಶಾಲೆ |
| | ವಿಜಯಪುರ | 156 | ತಿಕೋಟಾ | ಅರಕೇರಿ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ವಿಜಯಪುರ | 157 | ಬಬಲೇಶ್ವರ | ಬಬಲೇಶ್ವರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ವಿಜಯಪುರ | 158 | ಬಸವನ ಬಾಗೇವಾಡಿ | ಬಸವನ ಬಾಗೇವಾಡಿ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| 30 | ಯಾದಗಿರಿ | 159 | ಶಹಾಪುರ | ಶಹಾಪುರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |
| | ಯಾದಗಿರಿ | 160 | ಯಾದಗಿರಿ | ಬಾಲಛೇಡ | ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ |
| | ಯಾದಗಿರಿ | 161 | ಸುರಪುರ | ಸುರಪುರ | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ |

Director
Directorate of Minorities
Bangalore - 560 001